ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 6-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳು: ಒಂದು ಅಧ್ಯಯನ

**ವಿಜಯ ಕುಮಾರ್ ಎನ್.ಸಿ***

*ಸಂಶೋಧನಾ ವಿದ್ಯಾರ್ಥಿ, ಗಾಂಧೀ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

***Abstract:***

*ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಮೈಸೂರು ಜಿಲ್ಲೆಯು ಪ್ರವಾಸಿತಾಣಗಳ ಬೀಡಾಗಿದ್ದು, ಪ್ರವಾಸಿಗರ ಸ್ವರ್ಗವೆನಿಸಿದೆ. ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ಮೈಸೂರು ನಾಡಿನ ಶಕ್ತಿ ಕೇಂದ್ರವಾಗಿತ್ತು. ನಾಡಿನ ಸಾಂಸ್ಕೃತಿಕ ರಾಜಧಾನಿ, ಯೋಜನಾಬದ್ಧ ನಗರ ಮತ್ತು ಸ್ವಚ್ಚ ನಗರಿ ಎಂಬ ಗರಿ ಹೊಂದಿರುವ ಮೈಸೂರು ಜಿಲ್ಲೆಯು ವಿಶ್ವ ಪ್ರವಾಸಿ ಭೂಪಟದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳ ಕುರಿತು ವಿವರಿಸಲಾಗಿದೆ.*

**Keywords:** *ಪ್ರವಾಸೋದ್ಯಮ, ಪ್ರವಾಸಿ ತಾಣಗಳು, ಅರಮನೆಗಳ ನಗರ, ಮೈಸೂರು ಅರಸರು.*

## ಪೀಠಿಕೆ

ಮೈಸೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲಿದ್ದು, ಹೆಚ್ಚಿನ ಜನಸಂಖ್ಯೆಯುಳ್ಳ ಜಿಲ್ಲೆಗಳಲ್ಲಿ ಬೆಂಗಳೂರು ಮತ್ತು ಬೆಳಗಾವಿ ನಂತರದ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕ ಇತಿಹಾಸದಲ್ಲಿ ತನ್ನದೇ ಆದ ಪ್ರಾಮುಖ್ಯತೆ ಪಡೆದಿದೆ. ಮೈಸೂರು ಮಹಾಸಂಸ್ಥಾನವು 1399 ರಿಂದ 1947ರವರೆಗೆ ಭಾರತಕ್ಕೆ ಸ್ವಾತಂತ್ರ್ಯ ಬರುವ ತನಕ ಮೈಸೂರು ಅರಸರಿಂದ ಆಳಲ್ಪಟ್ಟಿತು. ಕರ್ನಾಟಕ ರಾಜ್ಯವನ್ನು ಈ ಹಿಂದೆ ಮೈಸೂರು ರಾಜ್ಯ ಎಂದು ಕರೆಯಲ್ಪಡುತ್ತಿದ್ದ ಸಂಗತಿಯಿಂದ ಮೈಸೂರು ಪ್ರಾಮುಖ್ಯತೆಯನ್ನು ತಿಳಿಯ ಬಹುದಾಗಿದೆ.

ಕರ್ನಾಟಕದ ಮೈಸೂರಿನ ಪೂರ್ವ ಹೆಸರು 'ಮಹಿಷಾರಾಷ್ಟ್ರ' ಎಂದು ಕರೆಯಲಾಗುತಿತ್ತು ಎಂದು ಬೌದ್ಧ ಗ್ರಂಥವಾದ ದೀಪವಂಶದಲ್ಲಿ ಉಲ್ಲೇಖಿಸಲಾಗಿದೆ. ಕೆಲವು ವಿದ್ವಾಂಸರು ಮೈಸೂರಿನ ಹೆಸರನ್ನು ಪುರಾತನ ತಮಿಳು ಗ್ರಂಥಗಳಲ್ಲಿರುವ ಇರಮನಾಥ್ ನೊಂದಿಗೆ ಗುರುತಿಸುತ್ತಾರೆ ಆದರೆ ಇಂತಹ ಮೂಲವನ್ನು ಒಪ್ಪಲು ಸಾಧ್ಯವಿಲ್ಲ ಏಕೆಂದರೆ ಮೈಸೂರಿಗೆ ಸಂಬಂಧಿಸಿದ ಪ್ರಥಮ ಉಲ್ಲೇಖವು ಮಂಡ್ಯ ತಾಲ್ಲೂಕಿನ ಕಡಲೂರಿನಲ್ಲಿ ಕ್ರಿ.ಶ 852 ರಲ್ಲಿ ದೊರೆತಿರುವ ತಾಮ್ರ ಶಾಸನದಲ್ಲಿ ದೊರೆತಿದೆ.

ಈ ಶಾಸನದಲ್ಲಿ 11 ಮತ್ತು 12ನೇ ಶತಮಾನದಲ್ಲಿ ಈ ಸ್ಥಳವನ್ನು ಉಲ್ಲೇಖಿಸಿ ಸಾಹಿತ್ಯ ಲೋಕದ ಬೆಳವಣಿಗೆ ಕಾಣುತ್ತಿದ್ದಂತೆ ಈ ಹೆಸರನ್ನು 'ಮಹಿಷಾಸುರಪುರ' ಎಂದು ಉಚ್ಚರಿಸಲಾಗುತ್ತಿತ್ತು ಮೈಸೂರಿನ ಅಧಿದೇವತೆಯಾದ ತಾಯಿ ಚಾಮುಂಡೇಶ್ವರಿಯಿಂದ ಕೊಲ್ಲಲ್ಪಟ್ಟ ರಾಕ್ಷಸನಾದ 'ಮಹಿಷಾಸುರ' ಎಂಬ ಹೆಸರಿನಿಂದ ಉತ್ಪತ್ತಿಯಾಗಿದೆ ಎಂಬುದು ಬಹುತೇಕ ವಿದ್ವಾಂಸರ ಅಭಿಮತವಾಗಿದೆ.

***Please cite this article as:*** ವಿಜಯ ಕುಮಾರ್ ಎನ್.ಸಿ. (2023). ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(6), 6–11.

**ಅಂಬಾವಿಲಾಸ ಅರಮನೆ**

ಮೈಸೂರಿನ ಪ್ರಮುಖ ತಾಣಗಳಲ್ಲಿ ಅಂಬಾವಿಲಾಸ ಅರಮನೆ ಪ್ರಮುಖವಾದುದಾಗಿದೆ. ಈ ಅರಮನೆಯು ಮೈಸೂರು ಅರಸರ ನಿವಾಸವಾಗಿದ್ದು, ಪ್ರಾವಾಸಿಗರ ಆಕರ್ಷಣೆಯ ಪ್ರಮುಖ ತಾಣವಾಗಿದೆ. ಈ ಅರಮನೆಯು 1912ರಲ್ಲಿ ನಿರ್ಮಾಣಗೊಂಡಿತ್ತು. ಈ ಅರಮನೆಯು ಇಂಡೋ ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಿರುವ ಕಟ್ಟಡವಾಗಿದೆ. ಈ ಕಟ್ಟಡವು ಶ್ರೀಗಂಧದಂತ ಚಿನ್ನದ ಅಲಂಕೃತ ಕೆತ್ತನೆಗಳಿಂದ ಕಂಗೊಳಿಸುತ್ತಿದೆ. ಹಿಂದೂ ಮುಸ್ಲಿಂ, ರಜಪೂತ್ ಹಾಗೂ ಗೋಕಾಕ್ ಶೈಲಿಗಳನ್ನು ಹೊಂದಿದೆ. ಮಹಾರಾಜರ ಖಾಸಗಿ ವಸ್ತು ಸಂಗ್ರಹಾಲಯ, ದರ್ಬಾರ್ ಹಾಲ್, ಶಸ್ತ್ರಗಾರದಲ್ಲಿನ ವಿವಿಧ ಆಯುಧಗಳು, ಚಿನ್ನದ ಸಿಂಹಾಸನ, ದೇಗುಲಗಳು ಇಲ್ಲಿನ ಮುಖ್ಯ ಅಂಶಗಳಾಗಿವೆ.

**ಜಗನ್ಮೋಹನ ಅರಮನೆ**

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 1861ರಲ್ಲಿ ಜಗನ್ಮೋಹನ ಅರಮನೆಯನ್ನು ಕಟ್ಟಿಸಿದರು. ಇದು ಅರಮನೆಯ ಕೋಟೆಯ ಬ್ರಹ್ಮಪುರಿ ದ್ವಾರದ ಎದುರಿಗೆ ಇದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ವಿವಾಹ ಮತ್ತು ಪಟ್ಟಾಭಿಷೇಕ ಮಹೋತ್ಸವ ಇಲ್ಲಿ ನೆರವೇರಿತ್ತು. ಚಿತ್ರಗಳ ಗ್ಯಾಲರಿ (ಜಯಚಾಮರಾಜೇಂದ್ರ ಚಿತ್ರಶಾಲೆ) ವಸ್ತು ಸಂಗ್ರಹಾಲಯ ಇಲ್ಲಿದೆ. ವೈವಿಧ್ಯಮಯ ಗಡಿಯಾರಗಳು ಅಪರೂಪದ ವರ್ಣದ ಚಿತ್ರಗಳು ಸಂಗೀತ ಸಾಧನಗಳು ಪೀಠೋಪಕರಣ ಗಾಜಿನ ವಸ್ತುಗಳು ಇವೆ. ರಾಜಾ ರವಿವರ್ಮ, ನಂದನಲಾಲ್ ಬೋಸ್, ಸ್ವೆಟೋಸ್ಲಾಮ್ ರೋರಿಚ್, ಹಲ್ದೇಂಕರ್ ಅವರ ಕಲಾ ಕೃತಿಗಳನ್ನು ಪ್ರದರ್ಶಿಸಲಾಗಿದೆ.

**ಲಲಿತ ಮಹಲ್ ಅರಮನೆ**

ಲಲಿತ ಮಹಲ್ ಅರಮನೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿದೆ. ಇದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1622ರಲ್ಲಿ ಕಟ್ಟಿಸಿದರು. ನಗರದಿಂದ 5 ಕಿ.ಮೀ ದೂರದಲ್ಲಿದೆ. ಈ ಐಷಾರಾಮಿ ಹೋಟೆಲಿನ ವಿನ್ಯಾಸ ಮನೋಹರ ಕಂಬಗಳು ತೂಗುದೀಪ, ಚಾವಣಿ ಗಮನಸೆಳೆಯುತ್ತದೆ. ಬಾಂಬೆಯ ಪ್ರಸಿದ್ಧ ವಾಸ್ತುಶಿಲ್ಪ ತಜ್ಞರಾಗಿದ್ದ ಇ.ಡಬ್ಲ್ಯೂ ಪೀಟ್ಲೆ ಎರಡು ಅಂತಸ್ತಿನ ಈ ಕಟ್ಟಡ ನಿರ್ಮಾಣ ವೆಚ್ಚ 13 ಲಕ್ಷವಾಗಿದೆ.

**ಪ್ರಾಚ್ಯವಿದ್ಯಾ ಸಂಶೋಧನಾಲಯ**

ಮಹಾರಾಜ ಕಾಲೇಜಿನ ಗೋರ್ಡಾನ್ ಪಾರ್ಕ್ ಬಳಿ ಪ್ರಾಚ್ಯವಿ ಸಂಶೊಧನಾಲಯ ಇದೆ. 1891ರಲ್ಲಿ ಈ ಕಟ್ಟಡವನ್ನು ಕಟ್ಟಲಾಯಿತು. ಇದನ್ನು ಬಹಳ ಕಾಲದವರೆಗೆ ಸರ್ಕಾರಿ ಓರಿಯಂಟಲ್ ಲೈಬ್ರರಿ ಎಂದು ಕರೆಯಲಾಗುತ್ತಿತ್ತು. ಭಾರತೀಯ ಸಾಹಿತ್ಯ ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ಕೃತಿಗಳನ್ನು ಪತ್ತೆ ಹಚ್ಚಿ ಸಂಪಾದಿಸಿ ಪ್ರಕಟಿಸುವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪಿಸಲಾಯಿತು. ಸಂಸ್ಥೆಯಲ್ಲಿ ಉನ್ನತವಾದ ಗ್ರಂಥ ಭಂಡಾರ ಇದೆ. 60 ಸಾವಿರಕ್ಕೂ ಹೆಚ್ಚು ಹಸ್ತ ಪ್ರತಿಗಳೂ, 30 ಸಾವಿರಕ್ಕೂ ಹೆಚ್ಚು ಸಂಸ್ಕೃತ ಇಂಗ್ಲೀಷ್, ತಮಿಳು ಭಾಷೆಯ ಗ್ರಂಥಗಳು ಇಲ್ಲಿವೆ.

**ಜಾನಪದ ವಸ್ತು ಸಂಗ್ರಹಾಲಯ**

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿನ ಜಯಲಕ್ಷ್ಮಿ ವಿಲಾಸ ಕಟ್ಟಡದಲ್ಲಿ ಜಾನಪದ ವಸ್ತು ಸಂಗ್ರಹಾಲಯ ನೆಲೆಗೊಂಡಿದೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ 1967–68ನೇ ಸಾಲಿನಲ್ಲಿ ಸ್ಥಾಪಿತವಾಯಿತು. ದಕ್ಷಿಣ ಪೂರ್ವ ಏಷ್ಯದ ಅತಿದೂಡ್ಡ ಮತ್ತು ಸುಸಜ್ಜಿತ

ಜಾನಪದ ವಸ್ತು ಸಂಗ್ರಹಾಲಯ ಎಂಬ ಹೆಗ್ಗಳಿಕೆ ಹೊಂದಿದೆ. ಸೂತ್ರದ ಗೊಂಬೆಗಳು, ತೊಗಲು ಗೊಂಬೆಗಳು, ಆಭರಣಗಳು, ಮರದ ಕೆತ್ತನೆಗಳು ಸೇರಿದಂತೆ ಜಾನಪದಕ್ಕೆ ಸಂಬಂಧಪಟ್ಟ ಸುಮಾರು 6,500 ವಸ್ತುಗಳು ಇಲ್ಲಿವೆ.

**ರೈಲ್ವೆ ಮ್ಯೂಸಿಯಂ**

ಮೈಸೂರಿನಲ್ಲಿ 1979ರಲ್ಲಿ ರೈಲ್ವೆ ವಸ್ತು ಸಂಗ್ರಹಾಲಯವು ಸ್ಥಾಪನೆಗೊಂಡಿತ್ತು. ಹಿಂದೆ ಬಳಕೆಯಲ್ಲಿದ್ದ ರೈಲು ಎಂಜಿನ್‌ಗಳು ಬೋಗಿಗಳು ಮತ್ತು ರೈಲ್ವೆ ಇಲಾಖೆಗಳಲ್ಲಿ ಬಳಸುತ್ತಿದ್ದ ಅಪರೂಪದ ವಸ್ತುಗಳ ಸಂಗ್ರಹವಿದೆ. ರೈಲ್ವೆ ಇಲಾಖೆ ವಿವಿಧ ಕಾಲಘಟ್ಟಗಳಲ್ಲಿ ಬೆಳೆದ ರೋಚಕ ಕಥನ ಪರಿಚಯಿಸುತ್ತದೆ.

**ಸಂಗ್ರಹಾಲಯ**

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯವನ್ನು 1995ರಲ್ಲಿ ಸ್ಥಾಪಿಸಿತು. ಜೀವ ವಿಕಾಸ ಪ್ರಾಣಿಗಳ ಚರಿತ್ರೆ ಪರಿಸರ ಸಿರಿ ಕುರಿತು ಅರಿವು ಮೂಡಿಸುವ ಈ ಮ್ಯೂಸಿಯಂ ವಿಜ್ಞಾನಕ್ಕೆ ಸಂಬಂಧಿತ ವಿಷಯಗಳ ಆಗರವಾಗಿದೆ. ದಕ್ಷಿಣ ಭಾರತದ ಜೀವ ವೈವಿಧ್ಯದ ಬಗೆಗೆ ಒತ್ತು ನೀಡಿ ಅವುಗಳ ಇರುವಿಕೆ ಮತ್ತು ಸಂರಕ್ಷಣೆಯ ಮಹತ್ವದ ಭೌಗೋಳಿಕ ಸಸ್ಯ–ಪ್ರಾಣಿ ಪರಂಪರೆಯನ್ನು ಇಲ್ಲಿ ಬಿಂಬಿಸಲಾಗಿದೆ. ಮೈಸೂರು, ಟಿ.ನರಸೀಪುರ ರಸ್ತೆಯ ಸಿದ್ದಾರ್ಥನಗರದಲ್ಲಿ ಹಾಲಿನ ಡೇರಿ ಸಮೀಪದಲ್ಲಿ ಈ ಮ್ಯೂಸಿಯಂ ಇದೆ.

**ಚಾಮುಂಡಿ ಬೆಟ್ಟ**

ನೈಸರ್ಗಿಕ ಸಿರಿಯ ಚಾಮುಂಡಿ ಬೆಟ್ಟ ಮೈಸೂರಿನಿಂದ 13 ಕಿ.ಮೀ ದೂರದಲ್ಲಿದೆ. ಇದು ಸಮದ್ರ ಮಟ್ಟದಿಂದ 1074 ಮೀಟರ್ ಎತ್ತರದಲ್ಲಿರುವ ಈ ಬೆಟ್ಟದಲ್ಲಿ ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಸ್ಥಾನ ಇದೆ. ಈ ಬೆಟ್ಟ ಹತ್ತಲು 1000 ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದೇಗುಲದ ಸಮೀಪದಲ್ಲೇ ಮಹಾಬಲೇಶ್ವರ ಗುಡಿ ಇದೆ. ಮಹಿಷಾಸುರನ ಪ್ರತಿಮೆ ಇದೆ, ಇದು 3.5 ಮೀಟರ್ ಎತ್ತರ ಇದೆ. ಚಾಮುಂಡಿ ಬೆಟ್ಟದ ಮತ್ತೊಂದು ಪ್ರಮುಖ ಆಕರ್ಷಣೆ ನಂದಿ ವಿಗ್ರಹ. ಎತ್ತರದ ಪೀಠದ ಮೇಲೆ ಕುಳಿತಂತೆ ಕೆತ್ತಲಾಗಿರುವ ಈ ವಿಗ್ರಹ 16 ಅಡಿ ಎತ್ತರ ಇದೆ.

**ಸಂತ ಫಿಲೋಮಿನಾ ಚರ್ಚ್**

ದಕ್ಷಿಣ ಭಾರತದ ಅದ್ವಿತೀಯ ಎಂಬ ಹೆಗ್ಗಳಿಕೆಯನ್ನು ಸಂತ ಫಿಲೋಮಿನಾ ಚರ್ಚ್ ಹೊಂದಿದೆ. ಸಂತ ಫಿಲೋಮಿನಾ ಮಾತೆಯ ಸ್ಮರಣಾರ್ಥ 1933ರಲ್ಲಿ ಈ ದೇವಾಲಯವನ್ನು ನಿರ್ಮಿಸಲಾಯಿತು. ಗೋಕಾಕ್ ಶೈಲಿಯ ಈ ಕಟ್ಟಡದ ಪ್ರವೇಶ ದ್ವಾರದಲ್ಲಿ 175 ಅಡಿ ಎತ್ತರದ ಅವಳಿ ಗೋಪುರಗಳು ಇವೆ.

**ರಾಷ್ಟ್ರೀಯ ಮಾನವ ಸಂಗ್ರಹಾಲಯ**

ರಾಷ್ಟ್ರೀಯ ಮಾನವ ಸಂಗ್ರಹಾಲಯವು 2001ರಲ್ಲಿ ಆರಂಭವಾಯಿತು. ನಗರದ ಇರ್ವಿನ್ ರಸ್ತೆಯಲ್ಲಿರುವ (ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸಮೀಪ) ಈ ಮ್ಯೂಸಿಯಂ ಮನುಕುಲದ ವಿಕಾಸವನ್ನು ಪರಿಚಯಿಸುತ್ತದೆ. ವಿಕಾಸದ ಹಾದಿಯಲ್ಲಿ ಮಾನವ ಬಳಸಿದ ಸಾಮಾಗ್ರಿಗಳ ಪ್ರದರ್ಶನವಿದೆ. ಪುರಾಣ ಕಲೆ ಇತ್ಯಾದಿ ಮಾಹಿತಿಗಳು ಇಲ್ಲಿವೆ.

**ಶತಮಾನ ಕಂಡ ಮೈಸೂರು ವಿಶ್ವವಿದ್ಯಾನಿಲಯ**

ರಾಜ್ಯದ ಮೊದಲ ಮತ್ತು ದೇಶದ 6ನೇ ವಿಶ್ವವಿದ್ಯಾನಿಲಯ ಎಂಬ ಹೆಗ್ಗಳಿಕೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇದೆ. ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ 1916 ಜುಲೈ 27 ರಂದು ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ಆಯಿತು ಇದು ಮಾನಸಗಂಗೋತ್ರಿ ಆವರಣ 750 ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ.

**ವ್ಯಾಕ್ ಮ್ಯೂಸಿಯಂ**

ಚಾಮುಂಡಿ ಬೆಟ್ಟಕ್ಕೆ ಸಾಗುವ ಮಾರ್ಗದಲ್ಲಿ (ಕುರುಬಾರ ಹಳ್ಳಿ ಮುಖ್ಯರಸ್ತೆ) ಸಂಗೀತ ಮತ್ತು ಸಂಗೀತ ವಾದ್ಯಗಳನ್ನು ಆಧರಿಸಿದ ಮಾಧುರ್ಯ ಲೋಕದ ಮೇಣದ ವಸ್ತು ಸಂಗ್ರಹಾಲಯ (ಮೆಲೋಡಿ ವರ್ಲ್ಡ್ ಆಫ್ ವ್ಯಾಕ್ಸ್ ಮ್ಯೂಸಿಯಂ) ಇದೆ. ಇಲ್ಲಿ ಸಜೀವ ಪ್ರಮಾಣದ 100 ಅರಗಿನ ಮೂರ್ತಿಗಳೂ ಇವೆ. ಭಾರತದ ಶಾಸ್ತ್ರೀಯ ವಾದ್ಯಗಳು, ಪಂಜಾಬಿ ಭಾಂಗ್ರಾ ಜಾಝ್, ರಾಕ್ ಮಧ್ಯಪೂರ್ವ ಪ್ರಾಂತ್ಯದ ಸುಮಾರು 300 ವಿವಿಧ ವಾದ್ಯಗಳನ್ನು ಪ್ರದರ್ಶಿಸಲಾಗಿದೆ.

**ಕಾರಂಜಿ ಕೆರೆ**

ಚಾಮರಾಜೇಂದ್ರ ಮೃಗಾಲಯಕ್ಕೆ ಹೊಂದಿಕೊಂಡಂತೆ ಕಾರಂಜಿ ಕೆರೆ ಇದೆ. ವನರಾಶಿಯಿಂದ ಆವೃತ್ತವಾಗಿರುವ ಪ್ರಶಾಂತ ಪರಿಸರ ಇಲ್ಲಿದೆ. ಪಂಜರದಲ್ಲಿ ಬಂಧಿಯಾಗಿರುವ ಬಾನಾಡಿಗಳ ಚಿಲಿಪಿಲಿ ಇಂಚರ ಮನಮೋಹಕ ನಿಸರ್ಗ ಸೊಬಗು ಕಣ್ಮನ ಸೆಳೆಯುತ್ತವೆ. ಚಿಟ್ಟೆ ಉದ್ಯಾನ ದೋಣಿವಿಹಾರ, ಹುಲ್ಲು ಹಾಸುಗಳು, ಮಕ್ಕಳ ಮೋಜಿನ ಉದ್ಯಾನ ವಿಹಾರಕ್ಕೆ ಕಾಲ್ನಡಿಗೆ ಇಲ್ಲಿನ ಪ್ರಮುಖ ಆಕರ್ಷಣೆಗಳು.

**ಫ್ಯಾಂಟಸಿ ಪಾರ್ಕ್**

ಮನೋರಂಜಕ ಜಲಕ್ರೀಡೆಗಳ ಮೋಜಿನ ತಾಣ ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ ನಗರದಿಂದ 7ಕಿ.ಮೀ ದೂರದಲ್ಲಿದೆ. ಕೆ.ಆರ್.ಎಸ್. ರಸ್ತೆಯಲ್ಲಿ ಸಾಗಿದರೆ ರಿಂಗ್ ರೋಡ್‌ನ ಬಲಬದಿಯಲ್ಲಿ ಈ ಪಾರ್ಕ್ ಇದೆ. 34 ಎಕರೆ ವಿಸ್ತೀರ್ಣದಲ್ಲಿ ಈ ಪಾರ್ಕ್ ಹರಡಿಕೊಂಡಿದೆ. ಬಹುಪಥದ ರೇಸಿಂಗ್ ಜಾರುಗಳು ಬೆಚ್ಚಗಿನ ಕೊಳ ಅಲೆಗಳು ಬೀಚ್ ಲೇಜಿ ರಿವರ್, ಮಕ್ಕಳ ಕೊಳ ಮೊದಲಾದವು ಇವೆ. ರೆಡ್ ಇಂಡಿಯನ್ ಜಲಪಾತ ಇಲ್ಲಿನ ಪ್ರಮುಖ ಆಕರ್ಷಣೆ.

**ಶ್ರೀ ಚಾಮರಾಜೇಂದ್ರ ಮೃಗಾಲಯ**

1892ರಲ್ಲಿ ಮೈಸೂರಿನಲ್ಲಿ ಮೃಗಾಲಯ ಸ್ಥಾಪಿಸಲಾಯಿತು. 1909ರ ಶ್ರೀ ಚಾಮರಾಜೇಂದ್ರ ಮೃಗಾಲಯ ಎಂದು ನಾಮಕರಣ ಮಾಡಲಾಯಿತು. ನಗರದ ಹೃದಯ ಭಾಗದಲ್ಲಿರುವ ದೇಶ ವಿದೇಶಗಳ ವಿವಿಧ ಪ್ರಭೇಧಗಳ ಪಕ್ಷಿಗಳು, ಪ್ರಾಣಿಗಳು, ಉರಗಗಳು, ಅಪರೂಪದ ವನ್ಯ ಜೀವಿಗಳಿವೆ.

**ನಂಜನಗೂಡಿನ ಶ್ರೀಕಂಠೇಶ್ವರ ದೇಗುಲ**

ರಾಜ್ಯದ ಅತಿದೊಡ್ಡ ದೇವಾಲಯಗಳಲ್ಲಿ ನಂಜನಗೂಡಿನ ಶ್ರೀಕಂಠೇಶ್ವರ ದೇಗುಲವೂ ಒಂದಾಗಿದೆ, ಶ್ರೀಕಂಠೇಶ್ವರ (ನಂಜುಂಡೇಶ್ವರ) ದೇಗುಲವು ಜಿಲ್ಲೆಯ ಕಪಿಲಾ ನದಿ ದಡೆಯ ನಂಜನಗೂಡಿನಲ್ಲಿದೆ. ಜಿಲ್ಲಾ ಕೇಂದ್ರದಿಂದ 20ಕಿ.ಮೀ ದೂರದಲ್ಲಿದೆ. ಕರ್ನಾಟಕದ ಮೊದಲ ಆಯುರ್ವೇದ ಕೇಂದ್ರ ನೆಲೆ

ಎಂಬ ಖ್ಯಾತಿ ಈ ಸ್ಥಳಕ್ಕೆ ಇದೆ. ಕಪಿಲಾ ಮತ್ತು ಗುಂಡ್ಲುಹೊಳೆ ಸಂಗಮದ ಬಳಿ ಪರಶುರಾಮ ಕ್ಷೇತ್ರವಿದೆ.

**ತಲಕಾಡು**

ದಕ್ಷಿಣ ಕಾಶಿ ಎಂದೇ ಪ್ರಸಿದ್ಧ ತಲಕಾಡು ಪುಣ್ಯಕ್ಷೇತ್ರವು ಟಿ.ನರಸೀಪುರ ತಾಲ್ಲೂಕಿನಲ್ಲಿದೆ. ಕಾವೇರಿ ನದಿಯ ಎಡದಂಡೆಗಡೆ ಹೊಂದಿಕೊಂಡಿದೆ. ಮೈಸೂರಿನಿಂದ 45 ಕಿ.ಮೀ ದೂರದಲ್ಲಿದೆ. ದ್ರಾವಿಡ ಮತ್ತು ಹೊಯ್ಸಳ ಶೈಲಿಯಲ್ಲಿ ನಿರ್ಮಿಸಿರುವ ವೈದ್ಯನಾಥೇಶ್ವರ, ಮರಳೇಶ್ವರ, ಪಾತಾಳೇಶ್ವರ, ಅರ್ಕೇಶ್ವರ, ಗೋಕರ್ಣೇಶ್ವರ ದೇಗುಲಗಳಿವೆ. 12ವರ್ಷಕ್ಕೊಮ್ಮೆ ಕ್ಷೇತ್ರದಲ್ಲಿ ಪಂಚಲಿಂಗದರ್ಶನ ನಡೆಯುತ್ತದೆ.

**ಸೋಮನಾಥಪುರ**

ಟಿ.ನರಸೀಪುರ ತಾಲ್ಲೂಕಿನಲ್ಲಿರುವ ಸೋಮನಾಥಪುರ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಜಿಲ್ಲಾ ಕೇಂದ್ರದಿಂದ 40 ಕಿ.ಮೀ ದೂರದಲ್ಲಿರುವ ಈ ತಾಣವನ್ನು ದೇವಾಲಯಗಳ ಊರು ಎಂದು ಹೇಳಲಾಗುತ್ತಿದೆ. ಇಲ್ಲಿನ ಪ್ರಖ್ಯಾತ ಕೇಶವ ದೇವಾಲಯವನ್ನು 1268 ರಲ್ಲಿ ನಿರ್ಮಿಸಲಾಗಿದೆ. ಇದು ಹೊಯ್ಸಳ ರಾಜ್ಯವಂಶದ ಅತ್ಯುತ್ತಮ ಸ್ಮಾರಕಗಳಲ್ಲೊಂದಾಗಿದೆ. 3 ಗೋಪುರಗಳ ಈ ತ್ರಿಕೂಟಾಚಲ ದೇವಾಲಯವನ್ನು ನಕ್ಷತ್ರಾಕಾರದಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತ, ಭಾಗವಂತ ಕಥಾ ನಿರೂಪಣೆಗಳ ಕೆತ್ತನೆಗಳು ಇವೆ. ಬೇಲೂರು, ಹಳೇಬೀಡು ಹಾಗೂ ಸೋಮನಾಥಪುರ ಹೊಯ್ಸಳ ವಾಸ್ತು ಶಿಲ್ಪದ ಸುವರ್ಣ ತ್ರಿಕೋನಗಳೂ ಎಂದು ಕರೆಯಲಾಗಿದೆ.

**ಸುತ್ತೂರು.**

ಸುತ್ತೂರು ಶ್ರೀಕ್ಷೇತ್ರ ನಂಜನಗೂಡು ತಾಲ್ಲೂಕಿನಲ್ಲಿದೆ. ಈ ಊರು ಕಪಿಲಾ ನದಿಯ ದಡದಲ್ಲಿದ್ದು, ನಗರದಿಂದ 26ಕಿ.ಮೀ ದೂರಲ್ಲಿದೆ. ಸುತ್ತೂರು ಮಹಾಸಂಸ್ಥಾನವು ಗುರು ಪರಂಪರೆ ಕ್ಷೇತ್ರವಾಗಿದೆ. ಮಠವು ಅನ್ನ ಮತ್ತು ಜ್ಞಾನ ದಾಸೋಹಕ್ಕೆ ಹೆಸರಾಗಿದೆ. ಪ್ರತಿವರ್ಷ ಫಬ್ರವರಿಯಲ್ಲಿ ನಡೆಯುವ ಸುತ್ತೂರು ಜಾತ್ರೆಗೆ ನಾಡಿನ ವಿವಿದೆಡೆಗಳಿಂದ ಭಕ್ತರು ಬರುತ್ತಾರೆ.

**ಅವಧೂತ ದತ್ತ ಪೀಠ**

ಸಚ್ಚಿದಾನಂದ ಆಶ್ರಮವು ನಂಜನಗೂಡು ರಸ್ತೆಯಲ್ಲಿದ್ದು ನಗರದಿಂದ 3 ಕಿ.ಮೀ ದೂರದಲ್ಲಿದೆ. ಇಲ್ಲಿ ದತ್ತಾತ್ರೇಯ ಮತ್ತು ವೆಂಕಟರಮಣ ಸ್ವಾಮಿ ದೇವಸ್ಥಾನ, ನಾದಮಂಟಪ ಪ್ರಾರ್ಥನಾ ಮಂದಿರ ಬೊನ್ಸಾಯ್ ಉದ್ಯಾನ ವಸ್ತುಸಂಗ್ರಹಾಲಯ ಇದೆ.

**ಗೊಮ್ಮಟಗಿರಿ**

ಗೊಮ್ಮಟಗಿರಿಯು ಹುಣಸೂರು ತಾಲ್ಲೂಕಿನಲ್ಲಿದ್ದು ಬಂಡೆಯ ಮೇಲೆ 18 ಅಡಿ ಎತ್ತರದ ಬಾಹುಬಲಿಯ ಏಕಶಿಲಾ ಮೂರ್ತಿಇವೆ ಮೂರ್ತಿಇವೆ. ಮೂರ್ತಿಗೆ ಪ್ರತಿವರ್ಷ ಮಸ್ತಕಾಭಿಷೇಕ ನಡೆಯುತ್ತದೆ. ಈ ಸ್ಥಳವು ಮೈಸೂರಿನಿಂದ 22ಕಿ.ಮೀ ದೂರದಲ್ಲಿದೆ.

**ಕಬಿನಿ ಜಲಾಶಯ**

ಕಬಿನಿ ಜಲಾಶಯವು ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೀಚನಹಳ್ಳಿ ಬಳಿ ಇದೆ ಕಪಿಲಾ ನದಿಗೆ ನಿರ್ಮಿಸಿರುವ ಅಣೆಕಟ್ಟು ಇದೆ. ನಗರದಿಂದ 65 ಕಿ.ಮೀ ದೂರದಲ್ಲಿದೆ. ಹೆಚ್.ಡಿ.ಕೋಟೆ ತಾಲ್ಲೂಕಿನ ಬಿರ್ವಾಳು ಗ್ರಾಮದ ಬಳಿ ನುಗು ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಮೈಸೂರು ಒಂದು ಪಾರಂಪರಿಕನಗರಿ ಈ ನಗರದಲ್ಲಿ ಪ್ರಾಚೀನ ಕಾಲದಿಂದಲೂ ರಾಜ ಮಹಾರಾಜರು ಪ್ರವಾಸಿತಾಣಗಳನ್ನು ಅಭಿವೃದ್ಧಿ ಪಡಿಸುತ್ತ ಬಂದಿರುತ್ತಾರೆ. ಈ ಪ್ರವಾಸಿ ತಾಣಗಳು ಇಂದಿಗೂ ಅತ್ಯಂತ ವಿಶಾಲವಾಗಿ ಬೆಳೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮೈಸೂರು ಅಂದರೆ ಎಲ್ಲಾರಿಗೂ ಒಂದು ವಿಸ್ಮಯ ಸೃಷ್ಠಿಯಾಗುತ್ತದೆ. ಮೈಸೂರು ಪ್ರವಾಸಿ ತಾಣಗಳ ಆಕರ್ಷಣೆಯು ಎಲ್ಲರ ಗಮನ ಸೆಳೆಯುತ್ತಿರುವುದು ತಿಳಿಯಬಹುದು. ಇದರಿಂದ ಪ್ರವಾಸಿಗರ ಸಂಖ್ಯೆ ದಿನೆ ದಿನೇ ಅಧಿಕವಾಗಿರುವುದು ನಮಗೆ ಕಂಡುಬರುತ್ತದೆ.

**ಆಕರ ಗ್ರಂಥಗಳು**


- *ಮೈಸೂರು ಗ್ಯಾಜೆಟಿಯರ್.* (1988) ಕರ್ನಾಟಕ ಗ್ಯಾಜೆಟಿಯರ್ ಡಿಪಾರ್ಟ್‌ಮೆಂಟ್,
- *ಅದೇ.*
- *ಮೈಸೂರು ಜಿಲ್ಲೆ ಮಾನವ ಅಭಿವೃದ್ಧಿ ವರದಿ.* (2018). ಕರ್ನಾಟಕ ಸರ್ಕಾರ.
- Inskeep, E. (1988). Tourism Planning: An Emerging Specialization. *Journal of the American Planning Association*, *54*(3), 360–372. https://doi.org/10.1080/01944368808976497
- Jose, D. (2019). *Karnataka: A special guide tailor-made for the foreign tourist*.
- Sampangi, R. V., Ritter, W., Vighnesh, N., & Ray, H. A. (2012). The knowledge city index: a case study of Mysore. *International Journal of Knowledge-Based Development*, *3*(2), 193. https://doi.org/10.1504/ijkbd.2012.047034